ಆ ಕೃತಿಯ ಪ್ರಕಟಣಾಪೂರ್ವ ಚರ್ಚೆಗೆಂದು ಹೈದರಾಬಾದಿಗೆ ಬರಲಾಗುತ್ತದೆಯೇ ಎಂದು ಶಿವಾರೆಡ್ಡಿಯವರೇ ಕೇಳಿದರು. ನಂದಿನಿ ಹೋಟೆಲಿನಲ್ಲಿ ರೂಮ್ ಮಾಡಿ, ಸಂಜೆಗೆ ಕವಿ ಡಾ. ಪೆನ್ನಾ ಶಿವ ರಾಮಕೃಷ್ಣ, ಪ್ರಕಾಶಕ ಗುಡಿಪಾಟು ಹಾಗೂ ಕನ್ನಡತೆಲುಗು ವಿದ್ವಾಂಸ ಜೊನ್ನವಿತ್ತುಲ ಶ್ರೀರಾಮಚಂದ್ರಮೂರ್ತಿಯವರಿಗೆಲ್ಲ ಬರಹೇಳಿ, ಇಂಬಲೀಬನ್ ಬಸ್‌ಸ್ಟ್ಯಾಂಡಿನಲ್ಲಿ ನನಗಾಗಿ ಕಾಯುತ್ತ ನಿಂತಿದ್ದರು. ನಾನವರ ಫೋಟೊ ನೋಡಿದ್ದೆ. ಅವರು ಫೋನ್ ಸಂಭಾಷಣೆಗಳಲ್ಲಿ ನನ್ನ ಧ್ವನಿಯನ್ನಷ್ಟೇ ಕೇಳಿದ್ದರು. ಬಸ್ಸಿಳಿದವನೇ ಅವರ ಹತ್ತಿರ ಹೋಗಿ ಪರಿಚಯ ಹೇಳಿಕೊಂಡೆ. ಅವರು ನಸುನಕ್ಕು ಸಣ್ಣಗೆ ಎಂಬಂತೆ ತಲೆ ಚಚ್ಚಿಕೊಂಡರು. 'ಏಮಯ್ಯಿಂದಿ ಸರ್' (ಏನಾಯ್ತು ಸರ್) ಎಂದದ್ದಕ್ಕೆ 'ಅಂಟೆ ನಾ ಊಹಲೋ ನಿನ್ನು 'ಕಾಸ್ತ' ಪೆದ್ದವಾಡನುಕುನ್ನಾನಯ್ಯಾ (ಅಂದರೆ ನನ್ನ ಕಲ್ಪನೆಯಲ್ಲಿ ನಿನ್ನನ್ನ ಇನ್ನೂ 'ಸ್ವಲ್ಪ' ದೊಡ್ಡವನು ಅಂದ್ಕೊಂಡಿದ್ದೆನಯ್ಯ) ಅಂದರು ಪಿಗ್ಗಿಗೆ ಬಿದ್ದವರಂತೆ. 'ಏಂ ಚೆಯ್ಯಾಲಿ ಸರ್, ಅನ್ಯಾಯಂಗಾ ನೇನು ಕಾಸ್ತ ಲೇಟ್ಗೆ ಪುಟ್ಟ್ಯಾನು!' (ಏನು ಮಾಡಲಿ ಸರ್, ಅನ್ಯಾಯವಾಗಿ ನಾನು 'ಸ್ವಲ್ಪ' ಲೇಟಾಗಿ ಹುಟ್ಟಿದೆ!) ಅಂದೆ. ಆ ಕುಶಾಲಿಗೆ 'ಭಲೇವಾಡಿವಯ್ಯ' ಅಂದವರೇ ಹಳೆಯ ಮಿತ್ರನಂತೆ ಜೋರಾಗಿ ಬೆನ್ನಿಗೆ ಬಾರಿಸಿ, ನಕ್ಕುಬಿಟ್ಟರು. ಮುಂದೆ 2016–19ರ ಅವಧಿಗೆ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಎಂ.ಎ ಕನ್ನಡದ ಮೂರನೇ ಸೆಮಿಸ್ಟರಿನ ವಿದ್ಯಾರ್ಥಿಗಳಿಗೆ ಇದೇ ಸಂಕಲನದಿಂದ ಆಯ್ದ ನಾಲ್ಕು ಪದ್ಯಗಳನ್ನು ವಿಭಾಗದ ಮುಖ್ಯಸ್ಥ, ಕವಿ ವಿಕ್ರಮ ವಿಸಾಜಿ ಹಾಗೂ ಟಿ.ಡಿ. ರಾಜಣ್ಣ ತೆಗ್ಗಿ ಪಠ್ಯಕ್ಕೆ ನಿಗದಿಪಡಿಸಿ ಕನ್ನಡ–ತೆಲುಗು ನಡುವೆ ಸಂಪರ್ಕ ಸೇತುವೆ ನಿರ್ಮಿಸಿದರು.

'ಅಯ್ಯಾ' ಅಂತಲೇ ಮಾತಿಗೆ ಮೊದಲಿಡುವ ಶಿವಾರೆಡ್ಡಿಯವರದು ಮೇಲೆ ಬಲು ಗಂಭೀರ ಮುಖ. ಒಳಗೆ ಅಷ್ಟೇ ಮಾತೃವಾತ್ಸಲ್ಯ. ಸದಾ ಜುಬ್ಬಾ ಮತ್ತು ಬಗಲ ಚೀಲದಲ್ಲಿ ಕಂಗೊಳಿಸುವ ತ್ರಿಲೋಕ ಸಂಚಾರಿ. ಉದ್ದಕ್ಕೆ ಹಿಂಬಾಚಿದ ಬೆಳ್ಳಿಕೂದಲು, ಉದ್ದ ಮೂಗು, ನೀಳ ಕಾಯ. ಇವರಿಗೆ ಈಗ ವಯಸ್ಸು ಕೇವಲ 76! ಕೇವಲ ಅಂತ ಯಾಕಂದೆ ಅಂದರೆ, ಯಾವಾಗ ಫೋನ್ ಮಾಡಿದರೂ ಆ ಇಡೀ ವಾರದ ತಿರುಗಾಟದ ವಿವರವನ್ನೂ, ಆ ವಾರದಲ್ಲಿ ಬರೆದ ಪದ್ಯಗಳ ಮಾಹಿತಿಯನ್ನೂ ಹೇಳಿದ ಮೇಲೆ ಕೊನೆಗೆ 'ಅಂಥಾ ವಿಶೇಷ ಅಂತ ಏನಿಲ್ಲಯ್ಯ. ಎಲ್ಲ ಮಾಮೂಲಿ!' ಅಂತಲೇ ಅವರನ್ನೋದು.

ಪ್ರಸ್ತುತ ತೆಲಂಗಾಣದ ರಾಜಧಾನಿ ಹೈದರಾಬಾದಿನಲ್ಲಿ ನೆಲೆಸಿರುವ ಶಿವಾರೆಡ್ಡಿಯವರ ಊರು ಈಗ ಆಂಧ್ರ ಪ್ರದೇಶ ರಾಜ್ಯದಲ್ಲಿ ಉಳಿದಿರುವ ಗುಂಟೂರು ಜಿಲ್ಲೆ ತೆನಾಲಿ ತಾಲ್ಲೂಕಿನ ಕಾರುಮೂರುವಾರಿಪಾಲೆಂ. ತಾವು ಆಂಧ್ರದವರಾದರೂ ಪ್ರತ್ಯೇಕ ತೆಲಂಗಾಣ ರಾಜ್ಯದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಅವರು 'ಅಸಮಾನತೆಯ ನಿವಾರಣೆಗಾಗಿ' ಅದು ಅನಿವಾರ್ಯವಾಗಿತ್ತೆಂದು ಚಳವಳಿಕಾರನ ದನಿಯಲ್ಲಿ ಹೇಳುತ್ತಲೇ, 'ಇಬ್ಬರು ಸೋದರರು ಬೇರೆ ಆದಂತೆ' ಎಂದು ಈ ಪ್ರಕ್ರಿಯೆಯನ್ನು ವಿವರಿಸುತ್ತ ಭಾವುಕರೂ ಆಗುತ್ತಾರೆ.

ಪ್ರಖರ ಎಡಚಿಂತನೆಯ ಶಿವಾರೆಡ್ಡಿಯವರಿಗೆ ತೆಲಂಗಾಣದ ಎಲ್ಲ ಪ್ರಮುಖ ಚಳವಳಿಗಳೊಂದಿಗೆ ನಿಕಟಸಂಪರ್ಕ. 'ಕವಿಯಾದವನು ಕಡ್ಡಾಯವಾಗಿ ಒಂದು ಸಾಮೂಹಿಕ ಚೇತನವನ್ನು, ಒಂದು ಸಾಮೂಹಿಕ ಶಕ್ತಿಯನ್ನು ಪಡೆದುಕೊಳ್ಳಬೇಕು' ಎಂದು ಅವರು ಸದಾ ಹೇಳುತ್ತಿರುತ್ತಾರೆ. 'ಪಶುಗಳು ತುಳಿದ ನೆಲವ ಪುಸ್ತಕವಾಗಿ ಭಾವಿಸುವುದು ಗೊತ್ತು ನನಗೆ', 'ಎರಡು ಗಂಟೆಯ ರಾತ್ರಿ ಯಾವನು ಎದ್ದಿರುತಾನೆ, ರೂಮಲ್ಲಿ ತಿರುಗುತ್ತಿರುವ ಫ್ಯಾನಲ್ಲದೆ?' 'ಕಾಫಿ ಕಪ್ಪು ನನ್ನನ್ನು ಗುಟುಕುಗುಟುಕಾಗಿ ಕುಡಿಯುತ್ತದೆ', 'ಫೆಬ್ರುವರಿ ಒಂದು ಪಕ್ಷಿ' ಎಂದೆಲ್ಲ ಬರೆದಿರುವ ಇವರು ಕವಿಯನ್ನು ಶಿವನಂತೆ ಅರ್ಧನಾರೀಶ್ವರ ಎಂದು ಕರೆಯಲು ಇಷ್ಟಪಡುತ್ತಾರೆ. 'ಬೀಜವಲ್ಲ, ಬರಿಯ ಬೆರಳಿಟ್ಟರೂ ಮೊಳಕೆಯೊಡೆಯಬಲ್ಲ ಜೀವದಾಯಿ' ಎಂದು ಹೆಣ್ಣನ್ನು ಚಿತ್ರಿಸುತ್ತಾರೆ. ಶಿವಾರೆಡ್ಡಿಯವರು